ಕೆ. ಜಿ. ಎಫ್.ನಲ್ಲಿ ಎಸ್. ಎಸ್. ಎಲ್. ಸಿ, ಹಾಗೂ ಪಿ. ಯು. ಸಿ.ಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು

೨೪೭ ಶ್ರೀ ಟಿ. ಎಸ್ ಮಣಿ (ಕೆ. ಜಿ. ಎಫ್).— ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೆ. ಜಿ. ಎಫ್. ನಲ್ಲಿ ಎಸ್. ಎಸ್. ಎಲ್. ಸಿ. ಮತ್ತು ಪಿ. ಯು. ಸಿ. ಯಿಂದ ಪ್ರತಿವರ್ಷ ಉತ್ತೀರ್ಣರಾಗುವ ವಿದ್ಯಾರ್ಥಿಗಳ ಸಂಖ್ಯೆ. ಬಾಲಕ ಮತ್ತು ಬಾಲಕಿಯರ ವಿವರಗಳನ್ನು ಪ್ರತ್ಯೇಕವಾಗಿ ಕೊಡಬಹುದು.

ಆ) ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಪಿ. ಯು. ಸಿ. ಮತ್ತು ಮೊದಲನೆ ವರ್ಷದ ಪದವಿ ತರಗತಿಗಳ ಪ್ರವೇಶ ಸಾಮರ್ಥ್ಯ.

ಇ) ಪದವಿ ತರಗತಿಗಳಲ್ಲಿರುವ ವಿದ್ಯಾರ್ಥಿನಿಯರುಗಳ ಸಂಖ್ಯೆ. ಸರ್ಕಾರದವರು ಕೆ. ಜಿ. ಎಫ್. ನಲ್ಲಿ ಬಾಲಕಿಯರ ಕಾಲೇಜನ್ನು ತೆರೆಯಲು ವಾಗ್ದಾನ ಮಾಡಿದ್ದಾರೆಯೇ.

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು):—

ಅ)

		ಬಾಲಕರು	ಬಾಲಕಿಯರು	ಒಟ್ಟು
ಎಸ್ ಎಸ್ ಎಲ್ ಸಿ	೧೯೬೪	೧೪೦೫	೧೨೦೦	೨೬೦೦
	೧೯೬೫	೧೦೯೮	೧೦೦೮	೨೧೯೬
ಪಿ ಯು ಸಿ	೧೯೬೪	೬೩೩	೨೨೯	೫೬೨
	೧೯೬೫	೨೨೬	೧೩೧	೩೫೭

ಆ)

	ಕನಿಷ್ಠ	ಗರಿಷ್ಠ
ಪಿ ಯು ಸಿ	೪೦	೮೦
ಮೊದಲನೆ ವರ್ಷದ ಪದವಿ ತರಗತಿ	೧೫	೪೪

ಇ) ಮೊದಲನೆ ವರ್ಷದ ಪದವಿ ತರಗತಿ — ೧೪೦
ಎರಡನೇ ವರ್ಷದ ಪದವಿ ತರಗತಿ — ೧೪೧
ಮೂರನೇ ವರ್ಷದ ಪದವಿ ತರಗತಿ — ೧೧೭

ಕೆ ಜಿ ಎಫ್ ನಲ್ಲಿ ಬಾಲಕಿಯರ ಕಾಲೇಜನ್ನು ತೆರೆಯಲು ಸರ್ಕಾರದವರು ಯಾವ ವಾಗ್ದಾನವನ್ನು ಮಾಡಿಲ್ಲ.

SRI T. S. MANI.—There is one Mining School, Why can't the Goverment convert it into an Engineeri g College ?

SRI M. RAGHUPATHY.—That is a separate question. However, we will consider it and if it is feasible, we well take it up.

SRI T. S. MANI.—Is there any programme to increase the number of seats in the I. T. I. ?

ಶ್ರೀ ಎಂ. ರಘುಪತಿ.—ಆ ವಿಷಯ ಈ ಪ್ರಶ್ನೆ ಕೆಳಗೆ ಬರುವುದಿಲ್ಲ. ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರುತ್ತೇನೆ.